Online Newspaper Clipping Service

**Dtd- Sunday, 20th, October- 2019**

ಪ್ರಜಾವಾಣಿ

Page No.03B

### ವೈದ್ಯಕೀಯ ವಿದ್ಯಾರ್ಥಿಗಳಿಗೆ ರಾಮಯ್ಯ ವಿ.ವಿ ಕುಲಪತಿ ಸುಂದರೇಶ್ ಕಿವಿಮಾತು

# ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ: ರಾಜಿ ಸಲ್ಲ

ಪ್ರಜಾವಾಣಿ ವಾರ್ತೆ

ಕೋಲಾರ: 'ಸಂಶೋಧನಾ ಸಾಹಿತ್ಯದ ವಿಮರ್ಶೆಯೊಂದಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವ ಕುರಿತು ಆಲೋಚಿಸಿ' ಎಂದು ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ಸಿ.ಸುಂದರೇಶ್ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಲ್ಲಿ ಶನಿವಾರ ನಡೆದ ಜಾಲಪ್ಪ ಆಸ್ಪತ್ರೆಯ ಬೆಳ್ಳಿ ಹಬ್ಬ ಹಾಗೂ ಕೇಂದ್ರದ ಮಾಜಿ ಸಚಿವ ಆರ್.ಎಲ್.ಜಾಲಪ್ಪರ 95ನೇ ಹುಟ್ಟುಹಬ್ಬ ಸಮಾರಂಭದಲ್ಲಿ ಮಾತನಾಡಿ, 'ಆಧುನಿಕ ಯುಗದಲ್ಲಿ ಬೆರಳ ತುದಿಯಲ್ಲೇ ಮಾಹಿತಿ ಲಭ್ಯ ಇರುವುದರಿಂದ ವ್ಯವಸ್ಥೆ ಸುಧಾರಣೆಗೆ ಚಿಂತನೆ ಅಗತ್ಯ. ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ ಅವರ ಸಂದಿಕಗಳಿಸಿ' ಎಂದರು.

'ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಅಗತ್ಯ. ಪ್ರತಿ ರೋಗಿಯ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಬೇಕು. ರೋಗಿಗಳ ಹಿತದೃಷ್ಟಿಯಿಂದ ಮಾಹಿತಿ ಸೋರಿಕೆಯಾಗದಂತೆ ಎಚ್ಚರ ವಹಿಸಬೇಕು. ಇಂಟರ್‌ನೆಟ್ ಯುಗದಲ್ಲಿ ಟೆಲಿಮೆಡಿಸನ್ ವ್ಯವಸ್ಥೆಯ ಅಳವಡಿಕೆ ದೊಡ್ಡ ಕೆಲಸವಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ಟೆಲಿಮೆಡಿಸನ್ ವ್ಯವಸ್ಥೆ ಬಹಳ ಮುಖ್ಯ' ಎಂದು ಅಭಿಪ್ರಾಯಪಟ್ಟರು.

'ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡುವ ವಿಚಾರದಲ್ಲಿ ಯಾವುದೇ ರಾಜಿ ಬೇಡ. ವೈದ್ಯಕೀಯ ಕ್ಷೇತ್ರದಲ್ಲಿನ ಆಧುನಿಕ ಸೌಲಭ್ಯಗಳನ್ನು ಜನರಿಗೆ ತಲುಪಿಸಬೇಕು. ವೈದ್ಯಕೀಯ ವೃತ್ತಿಯಲ್ಲಿ ಹಣ ಸಂಪಾದನೆಗಿಂತ ಮಾನವೀಯತೆ ಮುಖ್ಯ. ರೋಗಿ ಹಾಗೂ ವೈದ್ಯರ ಸಂಬಂಧ ಪ್ರಮುಖವಾದದ್ದು. ರೋಗಿಗಳಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ 100ರಷ್ಟು ಗುಣಮುಖರಾಗುತ್ತಾರೆ' ಎಂದು ಸಲಹೆ ನೀಡಿದರು.



ಕೋಲಾರದಲ್ಲಿ ಶನಿವಾರ ನಡೆದ ಜಾಲಪ್ಪ ಆಸ್ಪತ್ರೆಯ ಬೆಳ್ಳಿ ಹಬ್ಬ ಸಮಾರಂಭದಲ್ಲಿ ಕೇಂದ್ರದ ಮಾಜಿ ಸಚಿವ ಆರ್‌ಎಲ್‌ಜಾಲಪ್ಪ ಅವರನ್ನು ಸನ್ಮಾನಿಸಲಾಯಿತು.

**ಮುಖ್ಯಾಂಶಗಳು**

- ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ಕೊಡಿ
- ರೋಗಿಯ ಆರೋಗ್ಯದ ಮಾಹಿತಿ ಸಂಗ್ರಹಿಸಿ
- ಹಣ ಸಂಪಾದನೆಗಿಂತ ಮಾನವೀಯತೆ ಮುಖ್ಯ

> ಹಿಂದಿನ ವರ್ಷ ಜಾಲಪ್ಪ ಆಸ್ಪತ್ರೆ ವತಿಯಿಂದ ಕೇಂದ್ರದಿಂದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ 425 ಉಚಿತ ವೈದ್ಯಕೀಯ ಶಿಬಿರ ನಡೆಸಲಾಗಿದೆ. ಶಿಬಿರದಲ್ಲಿ 1.67 ಲಕ್ಷಕ್ಕೂ ಹೆಚ್ಚು ಮಂದಿಗೆ ಚಿಕಿತ್ಸೆ ನೀಡಲಾಗಿದೆ.
>
> –ಡಾ.ಲಕ್ಷ್ಮಯ್ಯ, ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಸೂಪರಿಂಟೆಂಡೆಂಟ್

**ವೈದ್ಯಕೀಯ ಸೇವೆ:** 'ಬರಪೀಡಿತ ಕೋಲಾರ ಜಿಲ್ಲೆಯಲ್ಲಿ ಜಾಲಪ್ಪರ ಆಸ್ಪತ್ರೆಯು ಸಾವಿರಾರು ಬಡ ರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಸೇವೆ ನೀಡುತ್ತಿದೆ. ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಶಿಕ್ಷಣ ನೀಡುತ್ತಿವೆ' ಎಂದು ಶಾಸಕ ಕೆ.ಶ್ರೀನಿವಾಸಗೌಡ ಮೆಚ್ಚುಗೆ ವ್ಯಕ್ತಪಡಿಸಿದರು.

'ಜಾಲಪ್ಪ ಅವರು ರಾಜಕೀಯದ ಜತೆಗೆ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿದ್ದಾರೆ. ಕೋಲಾರ ನಗರದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ತೆರೆದು ಶೈಕ್ಷಣಿಕ ಕ್ರಾಂತಿ ಮಾಡಿದ್ದಾರೆ' ಎಂದು ಬಣ್ಣಿಸಿದರು.

**1,200 ಹಾಸಿಗೆ:** '1994ರಲ್ಲಿ ಕೇವಲ 350 ಹಾಸಿಗೆ ಸಾಮರ್ಥ್ಯದೊಂದಿಗೆ ಆರಂಭವಾದ ಜಾಲಪ್ಪ ಆಸ್ಪತ್ರೆಯು ಈಗ 1,200 ಹಾಸಿಗೆ ಸಾಮರ್ಥ್ಯ ಹೊಂದಿದೆ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯ ಜತೆಗೆ ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಆಸ್ಪತ್ರೆ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ ವಿವರಿಸಿದರು.

'ಸಂಸ್ಥೆಯಲ್ಲಿ ವೈದ್ಯಕೀಯ ಪದವಿಯಲ್ಲಿ 1 ಸಾವಿರ ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವಿಯಲ್ಲಿ 600 ಹಾಗೂ ಅರೆ ವೈದ್ಯಕೀಯ ಪದವಿಗಳಲ್ಲಿ 680 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕ್ಯಾನ್ಸರ್ ರೋಗಿಗಳಿಗಾಗಿ ಒಂದು ವರ್ಷದೊಳಗೆ ಗಂಥಿ ಸಂಸ್ಥೆ ಸ್ಥಾಪಿಸಲಾಗುತ್ತದೆ' ಎಂದು ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಕುಲಪತಿ ಡಾ.ಎಸ್.ಕುಮಾರ್ ತಿಳಿಸಿದರು.

ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಅಧಿಕಾರಿಗಳು, ಶುಶ್ರೂಷಕಿಯರು ಹಾಗೂ ಸಿಬ್ಬಂದಿಗೆ ಪ್ರಶಸ್ತಿ ನೀಡಲಾಯಿತು. ಮಾಜಿ ಶಾಸಕ ಹಾಗೂ ಜಾಲಪ್ಪರ ಪುತ್ರ ನರಸಿಂಹಸ್ವಾಮಿ, ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ನಿರ್ದೇಶಕ ಜೆ.ರಾಜೇಂದ್ರ, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ದೇವರಾಜ ಅರಸು ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಪಿ.ಎನ್.ಶ್ರೀರಾಮುಲು, ಡಾ.ಎ.ವಿ.ಎಂ.ಕುಟ್ಟಿ, ಡಾ.ಸಿ.ಕೆ.ರಂಜನ್ ಇದ್ದರು.

# ಐಟಿ ಅಧಿಕಾರಿಗಳ ವಿರುದ್ಧ ದೂರು

■ ವಿಜಯವಾಣಿ ಸುದ್ದಿಜಾಲ ಕೋಲಾರ

» ದೇವರಾಜ ಅರಸು ವೈದ್ಯಕೀಯ ಕಾಲೇಜು ಕಾರ್ಯದರ್ಶಿ ನಾಗರಾಜ್ ಹೇಳಿಕೆ

ನಗರದ ದೇವರಾಜ ಅರಸು ವೈದ್ಯಕೀಯ ಕಾಲೇಜು ಸೇರಿ ಇನ್ನಿತರ ಸಂಸ್ಥೆಗಳ ಮೇಲೆ ಐಟಿ ಅಧಿಕಾರಿಗಳು ದಾಳಿ ನಡೆಸಿದ ವೇಳೆ ಸಿಬ್ಬಂದಿಗೆ ಕಿರುಕುಳ ನೀಡಿದ್ದು, ಐಟಿ ಮುಖ್ಯಸ್ಥರಿಗೆ ದೂರು ನೀಡಲು ನಿರ್ಧರಿಸಿರುವುದಾಗಿ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಕಾರ್ಯದರ್ಶಿ ಜಿ.ಎಚ್ .ನಾಗರಾಜ್ ತಿಳಿಸಿದರು.

ನಗರದ ಹೊರವಲಯದ ವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ತನಿಖೆ ವೇಳೆ ಕಾಲೇಜಿನ ಹಿರಿಯ ಪ್ರೊಫೆಸರ್ ಅವರಿಗೆ ಮನಬಂದಂತೆ ಪ್ರಶ್ನೆ ಕೇಳಿ ಮಾನಸಿಕ ಕಿರಕುಳ ನೀಡಿದ್ದಾರೆ ಎಂದು ದೂರಿದರು. ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ಅಳಿಯ ಸಿದ್ಧಾರ್ಥ ಸಾವಿಗೂ ಐಟಿ ಅಧಿಕಾರಿಗಳ ಕಿರುಕುಳವೇ ಕಾರಣ ಎಂದು ಆರೋಪ ಮಾಡಿದ ನಾಗರಾಜ್, ಐಟಿ ಅಧಿಕಾರಿಗಳು ಸುಳ್ಳು ಮಾಹಿತಿ ಆಧರಿಸಿ ನಮ್ಮ ಸಂಸ್ಥೆಗಳ ಮೇಲೆ ದಾಳಿ ಮಾಡಿದ್ದಾರೆ. ಅಧಿಕಾರಿಗಳ ಪ್ರಶ್ನೆಗೆ ನಾನು, ಸಿಬ್ಬಂದಿ ಉತ್ತರ ನೀಡಿದ್ದೇವೆ. ಕಾನೂನು ಪ್ರಕಾರ ಐಟಿ ತನಿಖೆಗೆ ಅವಕಾಶವಿದೆ, ಇದನ್ನು ಬಿಟ್ಟು ಪೂರ್ವಗ್ರಹ ಪೀಡಿತರಾಗಿ ದಾಳಿ ನಡೆಸಿದ್ದು ಸರಿಯಲ್ಲ. ಜಾಲಪ್ಪ ಆಸ್ಪತ್ರೆ ದಿನಾಚರಣೆಗಾಗಿ ಸಂಗ್ರಹಿಸಿದ್ದ 3.75 ಲಕ್ಷ ರೂ.ಮಾತ್ರ. ನಾನು ಅಕ್ರಮವಾಗಿ 1 ರೂಪಾಯಿನೂ ಸಂಗ್ರಹಿಸಿಲ್ಲವೆಂದು ಸ್ಪಷ್ಟಪಡಿಸಿದರು.

## ತಿಂಗಳಿಗೆ 4.5 ಲಕ್ಷ ರೂ. ಖರ್ಚು

ಜಾಲಪ್ಪ ಆಸ್ಪತ್ರೆಗೆ ಹಾಗೂ ಶಿಕ್ಷಣ ಸಂಸ್ಥೆಗೆ ತೆರಿಗೆ ವಿನಾಯಿತಿ ಇದ್ದರೂ ನಾವು ನಗರಸಭೆಗೆ 30 ಲಕ್ಷ ರೂ. ಪ್ರತಿವರ್ಷ ಪಾವತಿಸುತ್ತಿದ್ದೇವೆ. ನಗರಸಭೆಯಿಂದ ನಮಗೆ ಯಾವುದೇ ಪ್ರಯೋಜನವಿಲ್ಲ, ಇವರು ಎಂದಾದರೂ ಒಂದು ಲೀಟರ್ ನೀರು ಕೊಟ್ಟಿದ್ದಾರಾ? ರಸ್ತೆ, ಚರಂಡಿ, ಕಸವಿಲೇವಾರಿ ಏನಾದರೂ ಮಾಡಿದ್ದಾರಾ? ಆದರೂ ನೀರಿಗಾಗಿ ನಾವು ತಿಂಗಳಿಗೆ 4.5 ಲಕ್ಷ ರೂ.ಖರ್ಚು ಮಾಡುತ್ತಿದ್ದೇವೆ ಎಂದು ನಾಗರಾಜ್ ತಿಳಿಸಿದರು.

## ಮಹಿಳೆ ವಿರುದ್ಧ ದೂರು

ವೈದ್ಯಕೀಯ ಸೀಟು ಕೌನ್ಸೆಲಿಂಗ್‌ನಲ್ಲಿ ಅನ್ಯಾಯವಾಗಿದೆ ಎಂದು ಸುಳ್ಳು ಆರೋಪ ಮಾಡಿರುವ ಮಹಿಳೆ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಡಿಜಿಎಚ್‌ಎಸ್ ನೀಡುವ ಪಟ್ಟಿಯಂತೆಯೇ ನಾವು ದಾಖಲಾತಿ ಮಾಡಿದ್ದೇವೆ, ತಪ್ಪಿದ್ದರೆ ತೋರಿಸಲಿ ಎಂದು ನಾಗರಾಜ್ ಸವಾಲು ಹಾಕಿದರು.

ಉದಯವಾಣಿ

# ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ



**ಕೋಲಾರ:** ಕೃತಕ ಬುದ್ಧಿಮತ್ತೆ ಆಸ್ಪತ್ರೆ ಉದ್ಯಮದಲ್ಲಿ ಅತ್ಯಗತ್ಯವಾಗಿದೆ, ಸಂಶೋಧನಾ ಸಾಹಿತ್ಯದ ವಿಮರ್ಶೆಯೊಂದಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವ ಕುರಿತು ಆತ್ಮಾವಲೋಕನ ಮಾಡಿಕೊಳ್ಳಿ ಎಂದು ವೈದ್ಯಕೀಯ ವಿದ್ಯಾರ್ಥಿಗಳಿಗೆ ರಾಮಯ್ಯ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಡಿ.ಸಿ.ಸುಂದರೇಶ್ ಕರೆ ನೀಡಿದರು. ನಗರ ಹೊರವಲಯದ ದೇವರಾಜ ಅರಸು ವೈದ್ಯಕೀಯ ವಿವಿ ಆಡಿಟೋರಿಯಂನಲ್ಲಿ ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಬೆಳ್ಳಿ ಹಬ್ಬ ಹಾಗೂ ಮಾಜಿ ಸಂಸದ ಆರ್.ಎಲ್.ಜಾಲಪ್ಪ ಅವರ 95ನೇ ಹುಟ್ಟುಹಬ್ಬದಲ್ಲಿ ಪಾಲ್ಗೊಂಡು ಕೇಕ್ ಕತ್ತರಿಸಿದ ಜಾಲಪ್ಪ ಅವರಿಗೆ ಶುಭಾಶಯ ಕೋರಿ ಅವರು ಮಾತನಾಡುತ್ತಿದ್ದರು. ಆಧುನಿಕ ಯುಗದಲ್ಲಿ ಬೆರಳತುದಿಯಲ್ಲೇ ಮಾಹಿತಿ ಲಭ್ಯವಾಗುವುದರಿಂದ ವ್ಯವಸ್ಥೆಯ ಸುಧಾರಣೆಗೆ ಚಿಂತನೆ ಅಗತ್ಯ, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ಮೂಲಕ ಅವರ ನಂಬಿಕೆ ಬೆಳೆಸಿಕೊಳ್ಳಿ ಎಂದರು. ಪ್ರತಿ ರೋಗಿಯ ಡಾಟಾ ಸಂಗ್ರಹಿಸಿ, ಅದರ ರೋಗಿಯ ಡಾಟಾ ಭವಿಷ್ಯದ ದೃಷ್ಟಿಯಿಂದ ಹಂಚಿಕೆ ಬೇಡ ಎಂದು ತಿಳಿಸಿದ ಅವರು, ಇದರಿಂದ ಯಾವ ರೀತಿಯ ರೋಗ, ಯಾವ ರೀತಿಯ ಚಿಕಿತ್ಸೆ ಎಮದು ಅರಿಯಲು ಸಹಕಾರಿಯಾಗುತ್ತದೆ ಎಂದರು.ಇಂಟರ್‌ನೆಟ್ ಯುಗದಲ್ಲಿ ಟೆಲಿಮೆಡಿಸನ್ ಸ್ವಾಸ್ಥ್ಯ ಸುಧಾರಣೆ ದೊಡ್ಡ ಕೆಲಸವಲ್ಲ, ಹೆಲ್ತ್ ಕೇರ್ ಮ್ಯಾನೇಜ್‌ಮೆಂಟ್‌ನಲ್ಲಿ ಟೆಲಿಮೆಡಿಸನ್ ಅತಿ ಮುಖ್ಯ ಎಂದು ಅಭಿಪ್ರಾಯಪಟ್ಟರು. ರೋಗಿಗೆ ನೀಡುವ ಚಿಕಿತ್ಸಾ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದಿರಿ, ವೈದ್ಯಕೀಯ ಕ್ಷೇತ್ರದಲ್ಲಿನ ಆಧುನಿಕ ಸೌಲಭ್ಯಗಳನ್ನು ಜನತೆಗೆ ತಲುಪಿಸಬೇಕು ಎಂದು ಹೇಳಿದರು. ಶಾಸಕ ಕೆ.ಶ್ರೀನಿವಾಸಗೌಡ ಮಾತನಾಡಿದರು. ವೇದಿಕೆಯಲ್ಲಿ ಮಾಜಿ ಶಾಸಕ ಹಾಗೂ ಜಾಲಪ್ಪ ಅವರ ಪುತ್ರ ನರಸಿಂಹಸ್ವಾಮಿ, ಉಪಾಧ್ಯಕ್ಷ ರಾಜೇಶ್ ಜಗದಾಳೆ, ನಿರ್ದೇಶಕ ಜೆ.ರಾಜೇಂದ್ರ, ಪ್ರೊ ಚಾನ್ಸಲರ್ ಎ.ವಿ.ಮೊಹಿದ್ದೀನ್ ಕುಟ್ಟಿ ಉಪಸ್ಥಿತರಿದ್ದರು.

# ಜಾಲಪ್ಪ ಆಸ್ಪತ್ರೆ, ಸಂಶೋಧನಾ ಕೇಂದ್ರದ ಸಿಬ್ಬಂದಿಗೆ ಐಟಿ ಕಿರುಕುಳ



ನಾಗರಾಜ್.

**ಕೋಲಾರ:** ಅಮಾಯಕರನ್ನು ಸುಳಿಗೆ ಸಿಲುಕಿಸಲು ಆದಾಯ ತೆರಿಗೆ ಅಧಿಕಾರಿಗಳು ನೀಡಿರುವ ಕಿರುಕುಳದ ವಿರುದ್ಧ ದೆಹಲಿಗೆ ತೆರಳಿ ಆದಾಯ ತೆರಿಗೆ ಮುಖ್ಯಸ್ಥರಿಗೆ ದೂರು ನೀಡಲು ನಿರ್ಧರಿಸಿದ್ದೇವೆ ಎಂದು ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜೆ.ಎಚ್.ನಾಗರಾಜ್ ತಿಳಿಸಿದರು.

ನಗರ ಹೊರವಲಯದ ವೈದ್ಯಕೀಯ ವಿವಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರಿಯ ಪ್ರೊಫೆಸರ್‌ರನ್ನು ಅವರ ವಯಸ್ಸಿಗೂ ಗೌರವ ನೀಡದೇ ಮನಬಂದಂತೆ ಪ್ರಶ್ನೆ ಕೇಳಿದಾಗ ಅದಕ್ಕೆ ನಾವು ಪ್ರತಿರೋಧ ಒಡ್ಡಿದ್ದಾಗಿ ತಿಳಿಸಿದರು. ಎಸ್.ಎಂ.ಕೃಷ್ಣ ಅಳಿಯ ಸಿದ್ಧಾರ್ಥ ಸಾವಿಗೂ ಐಟಿ ಅಧಿಕಾರಿಗಳ ಕಿರುಕುಳವೇ ಕಾರಣ ಎಂದು ಆರೋಪ ಮಾಡಿದರು. ಐಟಿ ಅಧಿಕಾರಿಗಳು ಕಾನೂನು ದುರ್ಬಳಕೆ ಮಾಡಿಕೊಂಡಿದ್ದಾರೆ, ನಮ್ಮ ಅಕೌಂಟೆಂಟ್‌ಗೆ ಪೋರ್ಸ್ ಮಾಡಿ ಸುಳ್ಳನ್ನು ನಿಜ ಎಂದು ಒಪ್ಪಿಸುವ ವಿಫಲಯತ್ನ ನಡೆಸಿದ್ದಾರೆ ಎಂದು ಟೀಕಿಸಿದರು.ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ, ದಾಖಲೆ ನೀಡಿದ್ದೇವೆ, ಏನು ದಾಖಲೆ ಬೇಕಾದರೂ ತಗೊಂಡೋಗಲಿ, ನಮ್ಮಲ್ಲಿ ಪೇಪರ್‌ಲೆಸ್ ಆಡಳಿತವಿದೆ, ಅವರು ಎಷ್ಟೇ ಹುಡುಕಿದರೂ ಆಸ್ಪತ್ರೆ ದಿನಾಚರಣೆಗಾಗಿ ಸಂಗ್ರಹಿಸಿದ್ದ 3.75 ಲಕ್ಷ ರೂ. ಮಾತ್ರ ಅವರಿಗೆ ನಗದು ಸಿಕ್ಕಿರೋದು ಎಂದು ತಿಳಿಸಿದರು.

ನಮ್ಮಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ಎರಡು ಗುಂಪುಗಳಿಂದಾಗಿಯೇ ಇಂತಹ ಸುಳ್ಳು ದೂರು ನೀಡಲಾಗಿದೆ. ನಾವು ಶುದ್ಧವಾಗಿದ್ದೇವೆ, ಬೆರಳೆತ್ತಿ ತೋರುವಂತಿಲ್ಲ, ಈ ರೀತಿ ಮೂರು ಬಾರಿ ಐಟಿ ರೈಡ್ ಆಗಿದೆ ಏನು ಸಿಕ್ಕಿಲ್ಲ ಎಂದರು.

**ಮಹಿಳೆ ವಿರುದ್ಧ ದೂರು:** ವೈದ್ಯಕೀಯ ಸೀಟು ಕೌನ್ಸಿಲಿಂಗ್‌ನಲ್ಲಿ ಅನ್ಯಾಯವಾಗಿದೆ ಎಂದು ಮಾಧ್ಯಮಗಳಿಗೆ ತಿಳಿಸಿರುವ ಮಹಿಳೆ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಡಿಜಿಎಚ್‌ಎಸ್ ನೀಡುವ ಪಟ್ಟಿಯಂತೆಯೇ ನಾವು ದಾಖಲಾತಿ ಮಾಡಿದ್ದೇವೆ, ತಪ್ಪಿದ್ದರೆ ತೋರಿಸಲಿ, ಬಾಯಿಗೆ ಬಂದಂತೆ ಮಾತನಾಡೋದು ಸರಿಯಲ್ಲ ಎಂದರು.

**ತೆರಿಗೆ-ನಗರಸಭೆ ವಿರುದ್ಧ ದೂರು:** ಕೋಲಾರ ನಗರಸಭೆಗೆ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ಇದ್ದರೂ ನಾವು 30 ಲಕ್ಷ ರೂ. ಪ್ರತಿವರ್ಷ ಪಾವತಿಸುತ್ತಿದ್ದೇವೆ, ಇವರು ಎಂದಾದರೂ ಒಂದು ಲೀಟರ್ ನೀರು ಕೊಟ್ಟಿದ್ದಾರಾ? ರಸ್ತೆ, ಚರಂಡಿ, ಕಸ ವಿಲೇವಾರಿ ಏನಾದರೂ ಮಾಡಿದ್ದಾರಾ? ನೀರಿಗಾಗಿ ನಾವು ತಿಂಗಳಿಗೆ 4.5 ಲಕ್ಷ ರೂ. ಖರ್ಚು ಮಾಡುತ್ತಿದ್ದೇವೆ ಎಂದು ತಿಳಿಸಿದರು.

ನಗರಸಭೆಗೆ ಅಭಿವೃದ್ಧಿಗಾಗಿ 50 ಲಕ್ಷ ರೂ. ನೀಡಿದ್ದೇವೆ ಏನಾಯಿತೋ ಗೊತ್ತಿಲ್ಲ, ನಮಗೂ ಪರಿಸರ ಕಾಳಜಿ ಇದೆ. ನಮ್ಮ ಕಾಲೇಜು ಸುತ್ತಮುತ್ತಲ ಗ್ರಾಮಗಳಿಗೆ ಗಿಡ ನೆಡಲು ತಲಾ 50 ಸಾವಿರ ರೂ. ನೀಡಿದ್ದೇವೆ ಎಂದರು.

ವಿಜಯ ಕರ್ನಾಟಕ



# ಆದಾಯ ತೆರಿಗೆ ಮುಖ್ಯಸ್ಥರಿಗೆ ದೂರು ನೀಡುತ್ತೇನೆ



**ಕೋಲಾರ:** ಆದಾಯ ತೆರಿಗೆ ಅಧಿಕಾರಿಗಳು ನೀಡಿರುವ ಕಿರುಕುಳದ ವಿರುದ್ಧ ದೆಹಲಿಗೆ ತೆರಳಿ ಆದಾಯ ತೆರಿಗೆ ಮುಖ್ಯ ಸ್ಥರಿಗೆ ದೂರು ನೀಡಲು ನಿರ್ಧರಿಸಿದ್ದೇವೆ ಎಂದು ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜಿ. ಎಚ್.ನಾಗರಾಜ್ ತಿಳಿಸಿದರು.

ನಗರ ಹೊರವಲಯದ ವೈದ್ಯಕೀಯ ವಿವಿಯಲ್ಲಿಸುದ್ದಿಗಾರರೊಂದಿಗೆ ಶನಿವಾರ ಅವರು ಮಾತನಾಡಿದರು.

**ಮನ ಬಂದಂತೆ ಪ್ರಶ್ನೆ:** ಹಿರಿಯ ಪ್ರೊಫೆಸರ್‌ರನ್ನು ಅವರ ವಯಸ್ಸಿಗೂ ಗೌರವ ನೀಡದೇ ಮನ ಬಂದಂತೆ ಪ್ರಶ್ನೆ ಕೇಳಿದಾಗ ಅದಕ್ಕೆ ನಾವು ಪ್ರತಿರೋಧ ಒಡ್ಡಿದ್ದಾಗಿ ತಿಳಿಸಿದ ಅವರು, ಎಸ್.ಎಂ. ಕೃಷ್ಣ ಅಳಿಯ ಸಿದ್ದಾರ್ಥ ಸಾವಿಗೂ ಐಟಿ ಅಧಿಕಾರಿಗಳ ಕಿರುಕುಳವೇ ಕಾರಣ ಎಂದು ಆರೋಪಿಸಿದರು.ಐಟಿ ಅಧಿಕಾರಿಗಳು ಕಾನೂನು ದುರ್ಬಳಕೆ ಮಾಡಿಕೊಂಡಿದ್ದಾರೆ. ನಮ್ಮ ಅಕೌಂಟೆಂಟ್‌ಗೆ ಫೋರ್ಸ್ ಮಾಡಿ ಸುಳ್ಳನ್ನು ನಿಜ ಎಂದು ಒಪ್ಪಿಸುವ ವಿಫಲ ಯತ್ನ ನಡೆಸಿದ್ದಾರೆ ಎಂದು ಟೀಕಿಸಿದರು.

ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ. ದಾಖಲೆ ನೀಡಿದ್ದೇವೆ, ಏನು ದಾಖಲೆ ಬೇಕಾದರೂ ತಗೊಂಡೋಗಲಿ, ನಮ್ಮಲ್ಲಿ ಪೇಪರ್‌ಲೆಸ್ ಆಡಳಿ ತವಿದೆ, ಅವರು ಎಷ್ಟೇ ಹುಡು ಕಿದರೂ ಆಸ್ಪತ್ರೆ ದಿನಾಚರ ಣೆಗಾಗಿ ಸಂಗ್ರಹಿಸಿದ್ದ 3.75 ಲಕ್ಷ ರೂ. ಮಾತ್ರ ಅವರಿಗೆ ಹಣ ಸಿಕ್ಕಿರೋದು ಎಂದು ತಿಳಿಸಿದರು.

ನಮ್ಮಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ಎರಡು ಗುಂಪುಗಳಿಂದಾಗಿಯೇ ಇಂತಹ ಸುಳ್ಳು ದೂರು ನೀಡಲಾಗಿದೆ, ನಾವು ಶುದ್ಧವಾಗಿದ್ದೇವೆ, ಬೆರಳೆತ್ತಿ ತೋರುವಂತಿಲ್ಲ, ಈಗ್ಗೆ ಮೂರು ಬಾರಿ ಐಟಿ ರೈಡ್ ಆಗಿದೆ ಏನು ಸಿಕ್ಕಿಲ್ಲ ಎಂದು ತಿಳಿಸಿದರು. ವೈದ್ಯಕೀಯ ಸೀಟು ಕೌನ್ಸಿಲಿಂಗ್‌ನಲ್ಲಿ ಅನ್ಯಾಯವಾಗಿದೆ ಎಂದು ಮಾಧ್ಯಮಗಳಿಗೆ ತಿಳಿಸಿರುವ ಮಹಿಳೆ ವಿರುದ್ಧ ಮಾನ ನಷ್ಟ ಮೊಕದ್ದಮೆ ದಾಖಲಿ ಸುತ್ತೇವೆ, ವೈದ್ಯಕೀಯ ಶಿಕ್ಷಣ ನಿರ್ದೇಶ ನಾಲಯ ಡಿಜಿಎಚ್‌ಎಸ್ ನೀಡುವ ಪಟ್ಟಿ ಯಂತೆಯೇ ನಾವು ದಾಖಲಾತಿ ಮಾಡಿ ದ್ದೇವೆ, ತಪ್ಪಿದ್ದರೆ ತೋರಿಸಲಿ, ಬಾಯಿಗೆ ಬಂದಂತೆ ಮಾತನಾಡೋದು ಸರಿಯಲ್ಲ ಎಂದರು.

**ನಗರಸಭೆ ವಿರುದ್ಧ ದೂರು:** ಕೋಲಾರ ನಗರಸಭೆಗೆ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ಇದ್ದರೂ ನಾವು 30 ಲಕ್ಷ ಪ್ರತಿವರ್ಷ ಪಾವತಿ ಸುತ್ತಿದ್ದೇವೆ

➔ 17

## ತೆರಿಗೆ ಮುಖ್ಯಸ್ಥರಿಗೆ ದೂರು ನೀಡುತ್ತೇನೆ

ಇವರು ಎಂದಾದರೂ ಒಂದು ಲೀಟರ್ ನೀರು ಕೊಟ್ಟಿದ್ದಾರಾ? ರಸ್ತೆ, ಚರಂಡಿ,ಕಸವಿಲೇವಾರಿ ಏನಾದರೂ ಮಾಡಿದ್ದಾರಾ. ನೀರಿಗಾಗಿ ನಾವು ತಿಂಗಳಿಗೆ 4.5 ಲಕ್ಷ ಖರ್ಚು ಮಾಡು ತ್ತಿದ್ದೇವೆ ಎಂದು ತಿಳಿಸಿದರು.ನಗರಸಭೆಗೆ ಅಭಿವೃದ್ಧಿಗೆ 50 ಲಕ್ಷನೀಡಿದ್ದೇವೆ ಏನಾಯಿತೋ ಗೊತ್ತಿಲ್ಲ, ನಮಗೂ ಪರಿಸರ ಕಾಳಜಿ ಇದೆ, ನಮ್ಮ ಕಾಲೇಜು ಸುತ್ತಮುತ್ತಲ ಗ್ರಾಮ ಪಂಚಾಯಿತಿಗಳಿಗೆ ಗಿಡ ನೆಡಲು ತಲಾ 50 ಸಾವಿರ ನೀಡಿದ್ದೇವೆ ಎಂದರು.

ಕನ್ನಡಪ್ರಭ

# ಐಟಿ ಕಿರುಕುಳ: ದೂರು ನೀಡಲು ನಿರ್ಧಾರ

## ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜಿ.ಎಚ್.ನಾಗರಾಜ್

ಕೋಲಾರ: ಆದಾಯ ತೆರಿಗೆ ಅಧಿಕಾರಿಗಳು ಅಮಾಯಕರನ್ನು ಸುಳಿಗೆ ಸಿಲುಕಿಸಲು ನೀಡಿರುವ ಕಿರುಕುಳದ ವಿರುದ್ಧ ದೆಹಲಿಗೆ ತೆರಳಿ ಆದಾಯ ತೆರಿಗೆ ಮುಖ್ಯಸ್ಥರಿಗೆ ದೂರು ನೀಡಲು ನಿರ್ಧರಿಸಿದ್ದೇವೆ ಎಂದು ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ತಿಳಿಸಿದರು.

**ಸುಳ್ಳನ್ನು ನಿಜವೆಂದು ಒಪ್ಪಿಸಲು ಯತ್ನ:** ಶನಿವಾರ ನಗರ ಹೊರವಲಯದ ವೈದ್ಯಕೀಯ ವಿವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರಿಯ ಪ್ರೊಫೆಸರ್‌ರನ್ನು ಅವರ ವಯಸ್ಸಿಗೂ ಗೌರವ ನೀಡದೇ ಮನಬಂದಂತೆ ಪ್ರಶ್ನೆ ಕೇಳಿದಾಗ ಅದಕ್ಕೆ ನಾವು ಪ್ರತಿರೋಧ ಒಡ್ಡಿದ್ದಾಗಿ ತಿಳಿಸಿದರು. ನಮ್ಮ ಅಕೌಂಟೆಂಟ್‌ಗೆ ಒತ್ತಾಯ ಮಾಡಿ ಸುಳ್ಳನ್ನು ನಿಜ ಎರಿದು ಒಪ್ಪಿಸುವ ವಿಫಲ ಯತ್ನ ನಡೆಸಿ ಐಟಿ ಅಧಿಕಾರಿಗಳು ಕಾನೂನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಟೀಕಿಸಿದರು.

**ಸಿದ್ಧಾರ್ಥ ಸಾವಿಗೆ ಐಟಿ ಕಾರಣ:** ಅವರು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿಯೇ ಉತ್ತರಿಸಿದ್ದೇವೆ, ಅಗತ್ಯ ದಾಖಲೆಗಳನ್ನೂ ಒದಗಿಸಿದ್ದೇವೆ, ನಮ್ಮಲ್ಲಿ ಪೇಪರ್‌ಲೆಸ್ ಆಡಳಿತವಿದೆ, ಏನು ದಾಖಲೆ ಬೇಕಾದರೂ ತಗೊಂಡೋಗಲಿ, ಅವರು ಎಷ್ಟೇ ಹುಡುಕಿದರೂ ಆಸ್ಪತ್ರೆ ದಿನಾಚರಣೆಗಾಗಿ ಸಂಗ್ರಹಿಸಿದ್ದ 3.75 ಲಕ್ಷ ಮಾತ್ರ ಅವರಿಗೆ ಹಣ ಸಿಕ್ಕಿರೋದು ಎಂದು ತಿಳಿಸಿದ ಅವರು, ಎಸ್.ಎಂ.ಕೃಷ್ಣ ಅಳಿಯ ಸಿದ್ಧಾರ್ಥ ಸಾವಿಗೂ ಐಟಿ ಅಧಿಕಾರಿಗಳ ಕಿರುಕುಳವೇ ಕಾರಣ ಎಂದು ಆರೋಪ ಮಾಡಿದರು.

ವೈದ್ಯಕೀಯ ಸೀಟು ಕೌನ್ಸಿಲಿಂಗ್‌ನಲ್ಲಿ ಅನ್ಯಾಯವಾಗಿದೆ ಎಂದು ಮಾಧ್ಯಮಗಳಿಗೆ ತಿಳಿಸಿರುವ ಮಹಿಳೆ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ನೀಡುವ ಪಟ್ಟಿಯಂತೆಯೇ ನಾವು ದಾಖಲಾತಿ ಮಾಡಿದ್ದೇವೆ, ತಪ್ಪಿದ್ದರೆ ತೋರಿಸಲಿ ಎಂದರು.

**ನಗರಸಭೆಗೆ ₹30 ಲಕ್ಷ ಪಾವತಿ:** ಕೋಲಾರ ನಗರ ಸಭೆಗೆ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ಇದ್ದರೂ ನಾವು 30 ಲಕ್ಷ ಪ್ರತಿ ವರ್ಷ ಪಾವತಿಸುತ್ತಿದ್ದೇವೆ, ನಗರಸಭೆಗೆ ಅಭಿವೃದ್ಧಿಗಾಗಿ 50 ಲಕ್ಷ ನೀಡಿದ್ದೇವೆ ಏನಾಯಿತೋ ಗೊತ್ತಿಲ್ಲ ಎಂದರು.

ನಮ್ಮ ಕಾಲೇಜು ಸುತ್ತಮುತ್ತಲ ಗ್ರಾಮ ಪಂಚಾಯಿತಿಗಳಿಗೆ ಗಿಡ ನೆಡಲು ತಲಾ 50 ಸಾವಿರ ನೀಡಿದ್ದೇವೆ ಎಂದರು.

ವಿಶ್ವವಾಣಿ



ದೆಹಲಿಗೆ ತೆರಳಿ ಆದಾಯ ತೆರಿಗೆ ಅಧಿಕಾರಿಗಳ ವಿರುದ್ಧ ಆದಾಯ ತೆರಿಗೆ ಮುಖ್ಯಸ್ಥರಿಗೆ ದೂರು ನೀಡಲು ನಿರ್ಧಾರ

# ವೈದ್ಯಕೀಯ ಕಾಲೇಜು: ಉನ್ನತ ವಿದ್ಯಾಭ್ಯಾಸಕ್ಕೆ ಸಹಕಾರಿ




ಕೋಲಾರದ ಹೊರವಲಯದ ಆರ್.ಎಲ್ ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಆಶ್ರಯದಲ್ಲಿ ನಡೆದ 25ನೇ ವರ್ಷದ ಆಸ್ಪತ್ರೆ ದಿನಾಚರಣೆ ಹಾಗೂ ಕೇಂದ್ರ ಮಾಜಿ ಸಚಿವ ಆರ್.ಎಲ್ ಜಾಲಪ್ಪ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಕೇಂದ್ರ ಮಾಜಿ ಸಚಿವ ಜಾಲಪ್ಪ ಕೇಕ್ ಕತ್ತರಿಸಿ ಹುಟ್ಟುಹಬ್ಬವನ್ನು ಆಚರಿಸಿಕೊಂಡರು.

**ವಿಶ್ವವಾಣಿ ಸುದ್ದಿಮನೆ** ಕೋಲಾರ

ಕೇಂದ್ರ ಮಾಜಿ ಸಚಿವ ಆರ್.ಎಲ್ ಜಾಲಪ್ಪ ಅವರು ಅವಿಭಜಿತ ಜಿಲ್ಲೆಗೆ ವೈದ್ಯಕೀಯ ಕಾಲೇಜನ್ನು ನಿರ್ಮಾಣ ಮಾಡುವ ಮೂಲಕ ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕೆ ಹೆಚ್ಚು ಸಹಕಾರಿಯಾಗಿದೆ ಎಂದು ಶಾಸಕ ಕೆ. ಶ್ರೀನಿವಾಸಗೌಡ ಹೇಳಿದರು.

ನಗರದ ಹೊರವಲಯದ ಆರ್.ಎಲ್ ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಆಶ್ರಯದಲ್ಲಿ ನಡೆದ 25ನೇ ವರ್ಷದ ಆಸ್ಪತ್ರೆ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಜಾಲಪ್ಪ ಮೆಡಿಕಲ್ ಕಾಲೇಜು ಇಂದು ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಿದ್ದು, ವೈದ್ಯಕೀಯ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಗಳು ದೇಶದ ಮೂಲೆ ಮೂಲೆಗಳಲ್ಲಿ ವೈದ್ಯಕೀಯ ಸೇವೆಯನ್ನು ಮಾಡುತ್ತಿದೆ. ಇದಕ್ಕೆ ಜಾಲಪ್ಪ ಅವರು ದಾರಿದೀಪವಾಗಿದ್ದಾರೆ ಎಂದು ನುಡಿದರು.

ಇಂದು ಜಾಲಪ್ಪ ಅವರ 95ನೇ ವರ್ಷದ ಹುಟ್ಟುಹಬ್ಬ ಆಚರಣೆ ಮುಂದಿನ ನೂರು ವರ್ಷಗಳ ಆಚರಣೆಯನ್ನು ಮಾಡಿಕೊಳ್ಳಲಿ ದೇವರು ಆಯಸ್ಸು ಆರೋಗ್ಯವನ್ನು ವೃದ್ಧಿಸಲ್ಲಿ ಎಂದರು. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ರಾಜೇಂದ್ರ, ವೈದ್ಯರಾಜೇಶ್ ಜಗದಾಳೆ, ಸುರೇಂದ್ರನ್, ಕುಮಾರ್, ಮೊಯೀದೀನ್ ಕುಟ್ಟಿ, ಪ್ರದೀಪ್ ಕುಮಾರ್, ಪ್ರಸಾದ್, ಶ್ರೀರಾಮುಲು, ಲಕ್ಷ್ಮಯ್ಯ ಇದ್ದರು.

## ಕಾನೂನು ದುರ್ಬಳಕೆ

ಹಿರಿಯ ಪ್ರೊಫೆಸರ್‌ರನ್ನು ಅವರ ವಯಸ್ಸಿಗೂ ಗೌರವ ನೀಡದೇ ಮನಬಂದಂತೆ ಪ್ರಶ್ನೆ ಕೇಳಿದಾಗ ಅದಕ್ಕೆ ನಾವು ಪ್ರತಿರೋಧ ಒಡ್ಡಿದ್ದಾಗಿ ತಿಳಿಸಿದರು. ಎಸ್.ಎಂ.ಕೃಷ್ಣ ಅಳಿಯ ಸಿದ್ಧಾರ್ಥ ಸಾವಿಗೂ ಐಟಿ ಅಧಿಕಾರಿಗಳ ಕಿರುಕುಳವೇ ಕಾರಣ ಎಂದು ಆರೋಪ ಮಾಡಿದರು. ಐಟಿ ಅಧಿಕಾರಿಗಳು ಕಾನೂನು ದುರ್ಬಳಕೆ ಮಾಡಿಕೊಂಡಿದ್ದಾರೆ. ನಮ್ಮ ಅಕೌಂಟೆಂಟ್‌ಗೆ ಫೋರ್ಸ್ ಮಾಡಿ ಸುಳ್ಳನ್ನು ನಿಜ ಎಂದು ಒಪ್ಪಿಸುವ ವಿಫಲ ಯತ್ನ ನಡೆಸಿದ್ದಾರೆ ಎಂದು ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ಟೀಕಿಸಿದರು.

## ಐಟಿ ಅಧಿಕಾರಿಗಳಿಂದ ಕಿರುಕುಳ

ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿ, ಅಮಾಯಕರನ್ನು ಸುಳಿಗೆ ಸಿಲುಕಿಸಲು ಆದಾಯ ತೆರಿಗೆ ಅಧಿಕಾರಿಗಳು ನೀಡಿರುವ ಕಿರುಕುಳದ ವಿರುದ್ಧ ದೆಹಲಿಗೆ ತೆರಳಿ ಆದಾಯ ತೆರಿಗೆ ಮುಖ್ಯಸ್ಥರಿಗೆ ದೂರು ನೀಡಲು ನಿರ್ಧರಿಸಿದ್ದೇವೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ, ದಾಖಲೆ ನೀಡಿದ್ದೇವೆ, ಏನು ದಾಖಲೆ ಬೇಕಾದರೂ ತಗೊಂಡೋಗಲಿ, ನಮ್ಮಲ್ಲಿ ಪೇಪರ್‌ಲೆಸ್ ಆಡಳಿತವಿದೆ. ಅವರು ಎಷ್ಟೇ ಹುಡುಕಿದರೂ ಆಸ್ಪತ್ರೆ ದಿನಾಚರಣೆಗಾಗಿ ಸಂಗ್ರಹಿಸಿದ್ದ 3.75 ಲಕ್ಷ ರು.ಮಾತ್ರ ಅವರಿಗೆ ಹಣ ಸಿಕ್ಕಿರೋದು. ನಮ್ಮಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ಎರಡು ಗುಂಪುಗಳಿಂದ ಇಂತಹ ಸುಳ್ಳು ದೂರು ನೀಡಲಾಗಿದೆ. ನಾವು ಶುದ್ಧವಾಗಿದ್ದೇವೆ. ಮೂರು ಬಾರಿ ಐಟಿ ರೈಡ್ ಆಗಿದೆ ಏನು ಸಿಕ್ಕಿಲ್ಲ ಎಂದರು. ವೈದ್ಯಕೀಯ ಸೀಟು ಕೌನ್ಸಿಲಿಂಗ್ ನಲ್ಲಿ ಅನ್ಯಾಯವಾಗಿದೆ ಎಂದು ಮಾಧ್ಯಮಗಳಿಗೆ ತಿಳಿಸಿರುವ ಮಹಿಳೆ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಡಿಜಿಎಚ್‌ಎಸ್ ನೀಡುವ ಪಟ್ಟಿಯಂತೆಯೇ ನಾವು ದಾಖಲಾತಿ ಮಾಡಿದ್ದೇವೆ. ತಪ್ಪಿದ್ದರೆ ತೋರಿಸಲಿ, ಬಾಯಿಗೆ ಬಂದಂತೆ ಮಾತನಾಡೋದು ಸರಿಯಲ್ಲ ಎಂದರು.

ಅಂತರಗಂಗೆ



# ಜಾಲಪ್ಪ ಆಸ್ಪತ್ರೆ,ಸಂಶೋಧನಾ ಕೇಂದ್ರದ ಸಿಬ್ಬಂದಿಗೆ ಐಟಿ ಕಿರುಕುಳ

## ಆದಾಯ ತೆರಿಗೆ ಮುಖ್ಯಸ್ಥರಿಗೆ ದೂರು ನೀಡಲು ನಿರ್ಧಾರ–ಜಿ.ಹೆಚ್ ನಾಗರಾಜ್

ಅಂತರಗಂಗೆ ಸುದ್ದಿ

ಕೋಲಾರ,ಅ.19– ಅಮಾಯಕರನ್ನು ಸುಳಿಗೆ ಸಿಲುಕಿಸಲು ಆದಾಯ ತೆರಿಗೆ ಅಧಿಕಾರಿಗಳು ನೀಡಿರುವ ಕಿರುಕುಳದ ವಿರುದ್ಧ ದೆಹಲಿಗೆ ತೆರಳಿ ಆಧಾಯ ತೆರಿಗೆ ಮುಖ್ಯಸ್ಥರಿಗೆ ದೂರು ನೀಡಲು ನಿರ್ಧರಿಸಿದ್ದೇವೆ ಎಂದು ದೇವರಾಜ ಅರಸು ವೈದ್ಯಕೀಯ ವಿವಿ ಕಾರ್ಯದರ್ಶಿ ಜಿ.ಹೆಚ್.ನಾಗರಾಜ್ ತಿಳಿಸಿದರು.

ಶನಿವಾರ ನಗರ ಹೊರವಲಯದ ವೈದ್ಯಕೀಯ ವಿವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರಿಯ ಪ್ರೊಫೆಸರ್‌ರನ್ನು ಅವರ ವಯಸ್ಸಿಗೂ ಗೌರವ ನೀಡದೇ ಮನಬಂದಂತೆ ಪ್ರಶ್ನೆ ಕೇಳಿದಾಗ ಅದಕ್ಕೆ ನಾವು ಪ್ರತಿರೋಧ ಒಡ್ಡಿದ್ಧಾಗಿ ತಿಳಿಸಿದರು.

ಎಸ್.ಎಂ.ಕೃಷ್ಣ ಅಳಿಯ ಸಿದ್ಧಾರ್ಥ ಸಾವಿಗೂ ಐಟಿ ಅಧಿಕಾರಿಗಳ ಕಿರು ಕುಳವೇ ಕಾರಣ ಎಂದು ಆರೋಪ ಮಾಡಿದರು. ಐಟಿ ಅಧಿಕಾರಿಗಳು ಕಾನೂನು ದುರ್ಬಳಕೆ ಮಾಡಿಕೊಂಡಿದ್ದಾರೆ,ನಮ್ಮ ಅಕೌಂಟೆಂಟ್‌ಗೆ ಪೋರ್ಸ್ ಮಾಡಿ



ಸುಳ್ಳನ್ನು ನಿಜ ಎಂದು ಒಪ್ಪಿಸುವ ವಿಫಲ ಯತ್ನ ನಡೆಸಿದ್ದಾರೆ ಎಂದು ಟೀಕಿಸಿದರು.

ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ, ದಾಖಲೆ ನೀಡಿದ್ದೇವೆ, ಏನು ದಾಖಲೆ ಬೇಕಾದರೂ ತಗೊಂಡೋಗಲಿ, ನಮ್ಮಲ್ಲಿ ಪೇಪರ್ ಲೆಸ್ ಆಡಳಿತ ವಿದೆ, ಅವರು ಎಷ್ಟೇ ಹುಡುಕಿ ದರೂ ಆಸ್ಪತ್ರೆ ದಿನಾಚರಣೆಗಾಗಿ ಸಂಗ್ರಹಿಸಿದ್ದ 3.75 ಲಕ್ಷ ಮಾತ್ರ ಅವರಿಗೆ ಹಣ ಸಿಕ್ಕಿರೋದು ಎಂದು ತಿಳಿಸಿದರು.

ನಮ್ಮಲ್ಲಿ ಕೆಲಸ ಮಾಡುತ್ತಿ ರುವ ಸಿಬ್ಬಂದಿಯು ಎರಡು ಗುಂಪುಗಳಿಂದಾಗಿಯೇ ಇಂತಹ ಸುಳ್ಳು ದೂರು ನೀಡಲಾಗಿದೆ, ನಾವು ಶುದ್ಧವಾಗಿ ದ್ದೇವೆ, ಬೆರಳೆತ್ತಿ ತೋರುವಂತಿಲ್ಲ, ಈಗ್ಗೆ ಮೂರು ಬಾರಿ ಐಟಿ ರೈಡ್ ಆಗಿದೆ ಏನು ಸಿಕ್ಕಿಲ್ಲ ಎಂದರು.

### ಸುಳ್ಳು ಆರೋಪ ಮಹಿಳೆ ವಿರುದ್ಧ ದೂರು

ವೈದ್ಯಕೀಯ ಸೀಟು ಕೌನ್ಸಿಲಿಂಗ್‌ನಲ್ಲಿ ಅನ್ಯಾಯವಾಗಿದೆ ಎಂದು ಮಾಧ್ಯಮಗಳಿಗೆ ತಿಳಿಸಿರುವ ಮಹಿಳೆ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಡಿಜಿಹೆಚ್‌ಎಸ್ ನೀಡುವ ಪಟ್ಟಿಯಂತೆಯೇ ನಾವು ದಾಖಲಾತಿ ಮಾಡಿದ್ದೇವೆ, ತಪ್ಪಿದ್ದರೆ ತೋರಿಸಲಿ, ಬಾಯಿಗೆ ಬಂದಂತೆ ಮಾತನಾಡೋದು ಸರಿಯಲ್ಲ ಎಂದರು.

### ಕೋಲಾರ ನಗರಸಭೆ ಒಂದು ಲೀಟರ್ ನೀರು ಕೊಟ್ಟಿಲ್ಲ

ಕೋಲಾರ ನಗರಸಭೆಗೆ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ಇದ್ದರೂ ನಾವು 30 ಲಕ್ಷ ಪ್ರತಿವರ್ಷ ಪಾವತಿಸುತ್ತಿದ್ದೇವೆ, ಇವರು ಎಂದಾದರೂ ಒಂದು ಲೀಟರ್ ನೀರು ಕೊಟ್ಟಿದ್ದಾರಾ? ರಸ್ತೆ, ಚರಂಡಿ,ಕಸವಿಲೇವಾರಿ ಏನಾದರೂ ಮಾಡಿದ್ದಾರಾ? ನೀರಿಗಾಗಿ ನಾವು ತಿಂಗಳಿಗೆ 4.5 ಲಕ್ಷ ಖರ್ಚು ಮಾಡುತ್ತಿದ್ದೇವೆ ಎಂದು ತಿಳಿಸಿದರು.

ನಗರಸಭೆಗೆ ಅಭಿವೃದ್ದಿಗಾಗಿ 50 ಲಕ್ಷ ನೀಡಿದ್ದೇವೆ ಏನಾಯಿತೋ ಗೊತ್ತಿಲ್ಲ, ನಮಗೂ ಪರಿಸರ ಕಾಳಜಿ ಇದೆ, ನಮ್ಮ ಕಾಲೇಜು ಸುತ್ತಮುತ್ತಲ ಗ್ರಾಮ ಪಂಚಾಯಿತಿಗಳಿಗೆ ಗಿಡ ನೆಡಲು ತಲಾ 50 ಸಾವಿರ ನೀಡಿದ್ದೇವೆ ಎಂದರು.

ಕೋಲಾರ ಪ್ರಭ



## ಜಾಲಪ್ಪ ಹುಟ್ಟುಹಬ್ಬ,ಆಸ್ಪತ್ರೆ ಬೆಳ್ಳಿ ಹಬ್ಬದಲ್ಲಿ ಡಾ.ಸುಂದರೇಶ್ ಅಭಿಮತ

# ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆಗೆ ಆತ್ಮಾವಲೋಕನ ಮಾಡಿಕೊಳ್ಳಿ




ಕೋಲಾರ: ಕೃತಕ ಬುದ್ಧಿಮತ್ತೆ ಆಸ್ಪತ್ರೆ ಉದ್ಯಮದಲ್ಲಿ ಅತ್ಯಗತ್ಯವಾಗಿದೆ, ಸಂಶೋಧನಾ ಸಾಹಿತ್ಯದ ವಿಮರ್ಶೆಯೊಂದಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವ ಕುರಿತು ಆತ್ಮಾವಲೋಕನ ಮಾಡಿಕೊಳ್ಳಿ ಎಂದು ವೈದ್ಯಕೀಯ ವಿದ್ಯಾರ್ಥಿಗಳಿಗೆ ರಾಮಯ್ಯ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಡಿ.ಸಿ.ಸುಂದರೇಶ್ ಕರೆ ನೀಡಿದರು.

ನಗರ ಹೊರವಲಯದ ದೇವರಾಜ ಅರಸು ವೈದ್ಯಕೀಯ ವಿವಿ ಆಡಿಟೋರಿಯಂನಲ್ಲಿ ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಬೆಳ್ಳಿ ಹಬ್ಬ ಹಾಗೂ ಮಾಜಿ ಸಂಸದ ಆರ್.ಎಲ್.ಜಾಲಪ್ಪ ಅವರ 95ನೇ ಹುಟ್ಟುಹಬ್ಬದಲ್ಲಿಪಾಲ್ಗೊಂಡು ಕೇಕ್ ಕತ್ತರಿಸಿದ ಜಾಲಪ್ಪ ಅವರಿಗೆ ಶುಭಾಷಯ ಕೋರಿ ಅವರು ಮಾತನಾಡುತ್ತಿದ್ದರು. ಆಧುನಿಕ ಯುಗದಲ್ಲಿ ಬೆರಳತುದಿಯಲ್ಲೇ ಮಾಹಿತಿ ಲಭ್ಯವಾಗುವುದರಿಂದ ವ್ಯವಸ್ಥೆಯ ಸುಧಾರಣೆಗೆ ಚಿಂತನೆ ಅಗತ್ಯ, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ಮೂಲಕ ಅವರ ನಂಬಿಕೆ ಬೆಳೆಸಿಕೊಳ್ಳಿ ಎಂದರು.

ಪ್ರತಿ ರೋಗಿಯ ಡಾಟಾ ಕಲೆಕ್ಟ್ ಮಾಡಿ ಆದರ ರೋಗಿಯ ಡಾಟಾ ಭವಿಷ್ಯದ ದೃಷ್ಟಿಯಿಂದ ಹಂಚಿಕೆ ಬೇಡ ಎಂದು ತಿಳಿಸಿದ ಅವರು, ಇದರಿಂದ ಯಾವ ರೀತಿಯ ರೋಗ, ಯಾವ ರೀತಿಯ ಚಿಕಿತ್ಸೆ ಎಮದು ಅರಿಯಲು ಸಹಕಾರಿಯಾಗುತ್ತದೆ ಎಂದರು.

ಇಂಟರ್‌ನೆಟ್ ಯುಗದಲ್ಲಿ ಟೆಲಿಮೆಡಿಸನ್ ಸಿಸ್ಟಂ ಸುಧಾರಣೆ ದೊಡ್ಡ ಕೆಲಸವಲ್ಲ, ಹೆಲ್ತ್ ಕೇರ್ ಮ್ಯಾನೇಜ್‌ಮೆಂಟ್‌ನಲ್ಲಿ ಟೆಲಿಮೆಡಿಸನ್ ಅತಿ ಮುಖ್ಯ ಎಂದು ಅಭಿಪ್ರಾಯಪಟ್ಟರು.

ರೋಗಿಗೆ ನೀಡುವ ಚಿಕಿತ್ಸಾ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದಿರಿ, ವೈದ್ಯಕೀಯ ಕ್ಷೇತ್ರದಲ್ಲಿನ ಆಧುನಿಕ ಸೌಲಭ್ಯಗಳನ್ನು ಜನತೆಗೆ ತಲುಪಿಸಬೇಕು ಎಂದು

7ನೇ ಪುಟಕ್ಕೆ...

# ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆಗೆ ಆತ್ಮಾವಲೋಕನ ಮಾಡಿಕೊಳ್ಳಿ

1ನೇ ಪುಟದಿಂದ...

ಕಿವಿಮಾತು ಹೇಳಿದರು. ಜಾಲಪ್ಪಕಾರ್ಯಕ್ಕೆ ಕೆಎಸ್‌ಜಿ ಶ್ಲಾಘನೆ :- ಶಾಸಕ ಕೆ.ಶ್ರೀನಿವಾಸಗೌಡ ಮಾತನಾಡಿ, ಬರಪೀಡಿತ ಕೋಲಾರ ಜಿಲ್ಲೆಯಲ್ಲಿ ಉತ್ತಮ ಶಿಕ್ಷಣ ಸಂಸ್ಥೆ ಹಾಗೂ ಸಾವಿರಾರು ರೋಗಿಗಳ ಚಿಕಿತ್ಸೆಗೆ ಸುಸಜ್ಜಿತ ಆಸ್ಪತ್ರೆ ನೀಡಿದ ಜಾಲಪ್ಪ ಅವರ ಕಾರ್ಯವನ್ನು ಶ್ಲಾಘಿಸಿದರು.

ಕೋಲಾರ ನಗರ ಅಭಿವೃದ್ಧಿ ಹೊಂದಲು ಇಲ್ಲೊಂದು ಶಿಕ್ಷಣ ಸಂಸ್ಥೆಯನ್ನು ತಂದು ಇಲ್ಲಿನ ಜನತೆಗೆ ಸಾಮಾಜಿಕ ಸೇವೆಯನ್ನೂ ಮಾಡಿರುವ ಜಾಲಪ್ಪ ಅವರು ರಾಜಕಾರಣದಲ್ಲಿ ಮಾತ್ರವಲ್ಲ ಸಾಮಾಜಿಕ ಸೇವೆಗೂ ಸೈ ಎಂಬುದನ್ನು ಸಾಬೀತು ಮಾಡಿದ್ದಾರೆ ಎಂದರು.

ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ವಿ.ಲಕ್ಷ್ಮಯ್ಯ ಆಸ್ಪತ್ರೆಯ ವರದಿ ಮಂಡಿಸಿ, 1994 ರಲ್ಲಿ ಕೇವಲ 350 ಹಾಸಿಗೆಗಳೊಂದಿಗೆ ಆರಂಭವಾದ ಆಸ್ಪತ್ರೆ ಇಂದು 1200 ಹಾಸಿಗೆಗಳನ್ನು ಹೊಂದಿದೆ ಎಂದರು.

ಕೋಲಾರ,ಚಿಕ್ಕಬಳ್ಳಾಪುರ ಜಿಲ್ಲೆಗಳು ಮಾತ್ರವಲ್ಲದೇ ಪಕ್ಕದ ತಮಿಳುನಾಡು, ಆಂಧ್ರ ಪ್ರದೇಶದಿಂದಲೂ ರೋಗಿಗಳು ಬಂದು ಇಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಕಳೆದ ವರ್ಷ ಜಾಲಪ್ಪ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಿಂದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ 365 ದಿನದಲ್ಲಿ 425 ಉಚಿತ ವೈದ್ಯಕೀಯ ಶಿಬಿರಗಳನ್ನು ನಡೆಸಲಾಗಿದೆ, 1.67 ಲಕ್ಷಕ್ಕೂ ಹೆಚ್ಚು ಮಂದಿ ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದರು.

ಸರ್ಕಾರ ವಿವಿಧ ಆರೋಗ್ಯ ಸೇವೆಗಳಾದ ಆಯುಷ್ಮಾನ್ ಭಾರತ, ಜ್ಯೋತಿ ಸಂಜೀವಿನಿ, ಆರೋಗ್ಯ ಭಾಗ್ಯ, ಕಾರ್ಮಿಕರ ಇಎಸ್‌ಐ, ಆಂಧ್ರ ಪ್ರದೇಶ ಸರ್ಕಾರದ ಡಾ.ವೈಎಸ್‌ಆರ್ ಆರೋಗ್ಯ ಶ್ರೀ ಸೇವೆಗಳ ಸೌಲಭ್ಯದ ಜತೆಗೆ ವಿವಿಧ ವಿಮಾ ಕಂಪನಿಗಳ ಆರೋಗ್ಯ ಸೇವೆಗಳು ಜಾಲಪ್ಪ ಆಸ್ಪತ್ರೆಯಲ್ಲಿ ಲಭ್ಯವಿದೆ ಎಂದು ವಿವರಿಸಿದರು.

ಅರೆ ವೈದ್ಯಕೀಯ ವಿಜ್ಞಾನದ ವಿವಿಧ 12 ಪದವಿಗಳಲ್ಲಿ 680 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಆಸ್ಪತ್ರೆಯ ಡಯಾಗ್ನಸ್ಟಿಕ್ ಕೇಂದ್ರಕ್ಕೆ ರಾಷ್ಟ್ರೀಯ ಮಾನ್ಯತೆ ಲಭಿಸಿದೆ ಎಂದ ಅವರು, ಹೃದಯ ಸಂಬಂಧಿ ರೋಗಗಳಿಗೆ ನಾರಾಯಣ ಹೃದಯಾಲಯದಿಂದ ಈವರೆಗೆ 1073 ಮಂದಿಗೆ ಬೈಪಾಸ್ ಹಾರ್ಟ್ ಸರ್ಜರಿ ಮಾಡಲಾಗಿದೆ ಎಂದು ತಿಳಿಸಿದರು.

ಜಾಲಪ್ಪ ಆಸ್ಪತ್ರೆ,ಸಂಶೋಧನಾ ವಿವಿಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಜಾಲಪ್ಪ ಅವರದು ಆರೋಗ್ಯ ಸೇವೆ ಮಾತ್ರವಲ್ಲ ಆವರಣದಲ್ಲಿ ಸಾವಿರಾರು ಮರಗಳನ್ನು ಬೆಳೆಸಿದ್ದಾರೆ,ಇಳಿ ವಯಸ್ಸಿನಲ್ಲೂ ಸಾಮಾಜಿಕ ಕಳಕಳಿಗೆ ಮತ್ತೊಂದು ಹೆಸರು ಜಾಲಪ್ಪ ಎಂದು ಸಾಬೀತು ಮಾಡಿದ್ದಾರೆ ಎಂದರು.

ಮುಂದಿನ ವರ್ಷಕ್ಕೆ ಗಂಥಿ ಸಂಸ್ಥೆ ಆರಂಭ :- ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅರಸು ವಿವಿಯ ಕುಲಪತಿ ಡಾ.ಎಸ್.ಕುಮಾರ್, ಮುಂದಿನ ಆಸ್ಪತ್ರೆ ದಿನ,ಜಾಲಪ್ಪ ಹುಟ್ಟುಹಬ್ಬದ ವೇಳೆಗೆ ಆಸ್ಪತ್ರೆಯಲ್ಲಿ ಕ್ಯಾನ್ಸರ್ ರೋಗಿಗಳಿಗಾಗಿ ಗಂಥಿ ಸಂಸ್ಥೆ ಸ್ಥಾಪಿಸುವ ಉದ್ದೇಶವಿದೆ, ವೈದ್ಯಕೀಯ ಪದವಿಯಲ್ಲಿ ಸಾವಿರ ವಿದ್ಯಾರ್ಥಿಗಳು,ಸ್ನಾತಕೋತ್ತರ ಪದವಿಯಲ್ಲಿ 600 ಹಾಗೂ ಅರೆ ವೈದ್ಯಕೀಯ ಪದವಿಗಳಲ್ಲಿ 680 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದರು.

ಅಧಿಕಾರ,ನೌಕರರಿಗೆ ಪ್ರಶಸ್ತಿ ಪ್ರದಾನ :- ಆಸ್ಪತ್ರೆ ದಿನದ ಅಂಗವಾಗಿ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ ಶುಶ್ರೂಕಿಯರು, ಸಿಬ್ಬಂದಿ, ಕಂಪ್ಯೂಟರ್ ಆಪರೇಟರ್, ಅಕೌಂಟೆಂಟ್, ಟೆಕ್ನಿಷಿಯನ್, ಫಾರ್ಮಾಸಿಸ್ಟ್ ಸೇರಿದಂತೆ ವಿವಿಧ ವಿಭಾಗಗಳ ನೌಕರರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಉಪಕುಲಪತಿ ಡಾ.ಚಂದ್ರಶೇಖರಶೆಟ್ಟಿ, ಸಂಸ್ಥಾಪಕ ವೈದ್ಯಕೀಯ ಅಧೀಕ್ಷಕ ಡಾ.ಬೋರಪ್ಪ ಮತ್ತಿತರರನ್ನು ಸನ್ಮಾನಿಸಲಾಯಿತು.

ಜಾಲಪ್ಪ ಅವರಿಗೆ ಆತ್ಮೀಯ ಸನ್ಮಾನ :- ಜಾಲಪ್ಪ ಅವರಿಗೆ ಕಾಲೇಜು,ಅರಸು ವಿವಿ, ಸಂಶೋಧನಾ ಕೇಂದ್ರದ ವಿವಿಧ ವಿಭಾಗಗಳು, ವಿವಿಯ ಆಡಳಿತ ಮಂಡಳಿ, ಅಧ್ಯಾಪಕರು ಹುಟ್ಟುಹಬ್ಬದ ಶುಭಾಷಯ ತಿಳಿಸಿ ಸನ್ಮಾನಿಸಿದರು. ವೇದಿಕೆಯಲ್ಲಿ ಮಾಜಿ ಶಾಸಕ ಹಾಗೂ ಜಾಲಪ್ಪ ಅವರ ಪುತ್ರ ನರಸಿಂಹಸ್ವಾಮಿ, ಉಪಾಧ್ಯಕ್ಷ ರಾಜೇಶ್‌ಜಗದಾಳೆ,ನಿರ್ದೇಶಕ ಜೆ.ರಾಜೇಂದ್ರ, ಪ್ರೊ ಚಾನ್ಸಲರ್ ಎ.ವಿ.ಮೊಹಿದ್ದೀನ್ ಕುಟ್ಟಿ, ಏರ್‌ಮಾರ್ಷಲ್ ಡಾ.ಸಿ.ಕೆ.ರಂಜನ್, ವೈಸ್ ಚಾನ್ಸಲರ್ ಡಾ.ಪ್ರದೀಪ್ ಕುಮಾರ್, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಟ್ರಸ್ಟಿಗಳಾದ ಹನುಮಂತರಾಜು, ಉದಯ್,ಅರವಿಂದ್, ಸರಸ್ವತಿ, ಮೃಣಾಲಿನಿ, ಕಾಲೇಜು ವಿಭಾಗದ ಡಾ.ಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು.